## ಚಾರಣ, ಲಂಗಾರ್ ಆಕರ್ಷಣೆ

ಹೂಕಣಿವೆಯ ಜೊತೆಗೆ ಇದೇ ಪ್ರದೇಶದಲ್ಲಿರುವ ಹೇಮಕುಂಡ್ ಸಾಹಿಬ್‌ಗೂ ಒಂದು ಹೊತ್ತಿನ ಚಾರಣ ಮಾಡಬಹುದು. ಸಿಖ್ಖರ ಪವಿತ್ರ ತೀರ್ಥ ಯಾತ್ರಾಸ್ಥಳ ಇದಾಗಿದ್ದು, ಹಿಮಾವೃತ್ತ ಬೆಟ್ಟಗಳ ನಡುವೆ, ಹಿಮಸರೋವರದ ಬುಡದಲ್ಲಿರುವ ಗುರುದ್ವಾರ ಇಲ್ಲಿನ ಪ್ರೇಕ್ಷಣೀಯ ಸ್ಥಳ. ಇಲ್ಲಿ ಪ್ರಸಾದಕ್ಕೆಂದು ನೀಡುವ ಲಂಗಾರ್ ಬಾಯಿ ಚಪ್ಪರಿಸಿ ತಿನ್ನುವಷ್ಟು ರುಚಿಕರವಾಗಿರುತ್ತದೆ.

### ಚಾರಣ ಹೇಗೆ?

ಪಶ್ಚಿಮ ಹಿಮಾಲಯ ಪ್ರದೇಶದಲ್ಲಿರುವ ಚಮೋಲಿ ಜಿಲ್ಲೆಯ ಗಢವಾಲ್ ಊರಿನ, ಭ್ಯುಂದರ್ ಗಂಗಾ ಕಣಿವೆಯ ಮೇಲ್ತಟ್ಟಿನಲ್ಲಿದೆ ಈ 'ವ್ಯಾಲಿ ಆಫ್ ಫ್ಲವರ್ಸ್'. ಇದು ತನ್ನ ಅಲೌಕಿಕ ನಿಸರ್ಗ ಸೌಂದರ್ಯದಿಂದಾಗಿ ಚಾರಣಿಗರ, ಛಾಯಾಗ್ರಾಹಕರ ಪಾಲಿಗೆ ಸ್ವರ್ಗವೆನಿಸಿದೆ. ಹರಿದ್ವಾರದಿಂದ 275 ಕಿ.ಮೀ. ದೂರಕ್ಕೆ ಪ್ರಯಾಣಿಸಿ ಜೋಷಿಮಠಕ್ಕೆ ಬಂದು ತಂಗಿದರೆ, ಅಲ್ಲಿಂದ ವಾಹನದ ಮೂಲಕ ಗೋವಿಂದಘಾಟ್ ನಂತರದ ಊರು ಪುಲ್ನವರೆಗೆ ತಲುಪಬಹುದು. ಇಲ್ಲಿಂದ ಮುಂದೆ ವಾಹನಗಳು ಸಾಗದು. 'ವ್ಯಾಲಿ ಆಫ್ ಫ್ಲವರ್ಸ್' ಮತ್ತು ಸಿಖ್ಖರ ಪ್ರಮುಖ ಯಾತ್ರಾಮಂದಿರ 'ಹೇಮಕುಂಡ್ ಸಾಹಿಬ್'ಗೆ ಚಾರಣ ಪ್ರಾರಂಭವಾಗುವುದು ಇಲ್ಲಿಂದಲೇ. ಚಾರಣದ ಸೀಸನ್ ಇಲ್ಲಿಯ ಸ್ಥಳೀಯರಿಗೆ ದುಡಿಮೆಯ ಪರ್ವಕಾಲ. ತಿಂಡಿ–ಚಾಯ್‌ಗಳು, ಚಾರಣಕ್ಕೆ ಬೇಕಾಗುವ ಊರುಗೋಲು, ಬ್ಯಾಗ್, ರೈನ್ ಕೋಟ್ ಮತ್ತಿತರ ಅಗತ್ಯ ಸಾಮಗ್ರಿಗಳು ಇಲ್ಲಿನ ಅಂಗಡಿಗಳಲ್ಲಿ ದೊರಕುತ್ತವೆ. ಮೊದಲ ದಿನ ಪುಲ್ನದಿಂದ ಸುಮಾರು 8–9 ತಾಸುಗಳ, 11 ಕಿ.ಮೀ.ಗಳಷ್ಟು ಆರೋಹಣ ನಡೆಸಿದರೆ ಸಿಗುವುದು ಗಾಂಗ್ರಿಯ ಎಂಬ ಊರು. ಇದನ್ನು ಬೇಸ್ ಕ್ಯಾಂಪ್ ಸ್ಥಳ ಎಂದು ಕರೆಯುತ್ತಾರೆ.

ಈ ಸ್ಥಳವನ್ನು ತಲುಪುವವರೆಗೆ ಸಾಕಷ್ಟು ಮುಖ್ಯ ಹಳ್ಳಿಗಳಲ್ಲಿ ಸಣ್ಣಪುಟ್ಟ ತಿಂಡಿ ತಿನಿಸುಗಳ ಅಂಗಡಿಗಳು ಸಿಗುವುದರಿಂದ ಊಟ ತಿಂಡಿಗೆ ತೊಂದರೆಯಾಗುವುದಿಲ್ಲ. ಚಾರಣ ಮಾಡಲು ಸಾಧ್ಯವಾಗದೇ ಅಥವಾ ಇಷ್ಟಪಡದೇ



ಇರುವವರು ಜೋಷಿಮಠದಿಂದ ಗಾಂಗ್ರಿಯವರೆಗೆ ಹೆಲಿಕಾಪ್ಟರ್ ಮೂಲಕ ಪ್ರಯಾಣಿಸಬಹುದು ಮತ್ತು ವೈಮಾನಿಕ ಹಿಮಾಲಯ ಶ್ರೇಣಿಗಳ ವೈಮಾನಿಕ ನೋಟವನ್ನು ಆಸ್ವಾದಿಸಬಹುದು. (ಈ ವ್ಯವಸ್ಥೆ ಅಲ್ಲಿನ ವಾತಾವರಣದ ಮೇಲೆ ಅವಲಂಬಿತ) ಇನ್ನೊಂದು ಮುಖ್ಯವಾದ ಸೌಲಭ್ಯ, 'ಮ್ಯೂಲ್ ಅಥವಾ ಹೇಸರಗತ್ತೆ ಸವಾರಿ. ಬೆಟ್ಟದ ಮೇಲಿನ ಗಾಂಗ್ರಿಯ ಊರಿಗೆ ಸಕಲ ಸಾಮಗ್ರಿಗಳನ್ನು ಸಾಗಿಸಲು ಮ್ಯೂಲ್‌ಗಳೇ ಇಲ್ಲಿನ ಮುಖ್ಯ ಆಧಾರ. ಇದರ ಜೊತೆಗೆ ಪೋರ್ಟರ್ಸ್ ಅಥವಾ ಮಾಲಿಗಳು ತಮ್ಮ ಬೆನ್ನಿನ ಬುಟ್ಟಿಯಲ್ಲಿ ಪ್ರವಾಸಿಗರನ್ನು ಮತ್ತು ಭಾರದ ಚೀಲಗಳನ್ನು ಹೊತ್ತುಕೊಂಡು ಹೋಗುವ ದುಡಿಮೆಯನ್ನು ಮಾಡುತ್ತಾರೆ. ಪ್ರವಾಸೋದ್ಯಮವೇ ಮುಖ್ಯ ಆದಾಯವಾದುದರಿಂದ, ಸ್ಥಳದ ಸ್ವಚ್ಛತೆಗೆ ಆದ್ಯತೆ ನೀಡಿದ್ದಾರೆ. ಚಾರಣದ ಹಾದಿಗೆ ಅಡಚಣೆಯಾಗುವ ಮ್ಯೂಲ್ ತ್ಯಾಜ್ಯ, ಪ್ರವಾಸಿಗರು ಎಲ್ಲೆಂದರಲ್ಲಿ ಎಸೆಯುವ ಕಸಗಳು ಇತ್ಯಾದಿ ತ್ಯಾಜ್ಯವಸ್ತುಗಳ ನಿರ್ವಹಣೆಯನ್ನು, ಸ್ವಚ್ಛತಾಕಾರ್ಮಿಕರು ಅತ್ಯಂತ ಸಮಗ್ರವಾಗಿ ನಿರ್ವಹಿಸುವುದು ಪ್ರಶಂಸನೀಯ.

ಚಾರಣದ ಹಾದಿಯುದ್ದಕ್ಕೂ ಆಗಸದೆತ್ತರಕ್ಕೆ ಚಿಮ್ಮಿ ನಿಂತ ಹಸಿರು ಪೈನ್, ಓಕ್ ಮರಗಳು, ಸಮೃದ್ಧ ಸಸ್ಯರಾಶಿ, ಪಕ್ಕದಲ್ಲಿ ಕಣಿವೆಯಿಂದಿಳಿದು ರಭಸದಲ್ಲಿ ತನ್ನ ಪಥದಲ್ಲಿ ಸಾಗುವ ಪುಷ್ಪವತಿ ನದಿ, ಹಿಮಾಲಯದ ಶ್ರೇಣಿಗಳು, ಬಾಯಾರಿಕೆ ನೀಗಲು ಖನಿಜಯುಕ್ತ ತಣ್ಣನೆಯ ನೈಸರ್ಗಿಕ ನೀರು, ಇಂತಹ ಪ್ರಕೃತಿ ಮಡಿಲಲ್ಲಿ ಚಾರಣ ಮಾಡುತ್ತಿದ್ದರೆ, ನಡಿಗೆಯ ದಣಿವೇ ಗೊತ್ತಾಗುವುದಿಲ್ಲ. ಗಾಂಗ್ರಿಯಾ ತಲುಪಿದ ಮೇಲೆ ವಸತಿಗಾಗೆಂದು ಅಲ್ಲಿ ಸಾಕಷ್ಟು ಶೆರ್ಡ್ ಟೆಂಟ್‌ಗಳು, ಖಾಸಗಿ ಹೋಟೆಲು ಲಾಡ್ಜುಗಳಿವೆ. ಉತ್ತಮ ಊಟ ತಿಂಡಿಗಳು ದೊರೆಯುತ್ತವೆ. ಇಲ್ಲಿರುವ ಸಿಖ್ಖರ ಗುರುದ್ವಾರ ಹೇಮಕುಂಡ್ ಸಾಹಿಬ್‌ಗೆ ಬರುವ ಯಾತ್ರಾರ್ಥಿಗಳಿಗೆ ವಸತಿ ನೀಡುವ ವ್ಯವಸ್ಥೆ ಹೊಂದಿದೆ. ಗಾಂಗ್ರಿಯದಿಂದ ಎರಡನೇ ದಿನದ ಮೂರು ಕಿ.ಮೀ.ಗಳ ಚಾರಣ 'ವ್ಯಾಲಿ ಆಫ್ ಫ್ಲವರ್ಸ್' ಕಣಿವೆಗೆ ಮುಂದುವರೆಯುತ್ತದೆ. ಈ ಸಸ್ಯರಾಶಿಯ ಕಣಿವೆಗೆ ಮ್ಯೂಲ್‌ಗಳು ಹೋಗುವುದಿಲ್ಲ. ಪೋರ್ಟರ್ಸ್‌ಗಳ ಬಾಡಿಗೆ ಸೌಲಭ್ಯ ಸಿಗುತ್ತದೆ. ಚಾರಣದ ತುದಿ ತಲುಪುವವರೆಗೂ ಯಾವುದೇ ಅಂಗಡಿಗಳು ಲಭ್ಯವಿಲ್ಲ. ಹಾಗಾಗಿ ಆಹಾರವನ್ನು ಮುಂಚಿತವಾಗಿಯೇ ಕಟ್ಟಿಕೊಂಡು ಹೋಗಬೇಕು. ■

